**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸೆಷನ್ಸ್‌ಕೇಸ್ ನಂ. 17/2018**

**ದೋ.ಸಾ. : 6 ಫ್ರಾ.ಸಾ. : 4**

ಸಾಕ್ಷಿಯ ಹೆಸರು : ಮಂಜುನಾಥ
ತಂದೆಯ ಹೆಸರು : ಅಣ್ಣಪ್ಪ ಶೇಟ್
ವಯಸ್ಸು : 43 ವರ್ಷ
ಉದ್ಯೋಗ : ಬಂಗಾರದ ಕೆಲಸ
ವಾಸ : ಭಟ್ಕಳ

**ದಿನಾಂಕಃ 06-03-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸ್ ನವರು ನನ್ನ ಮುಂದೆ ಯಾವುದೇ ಪಂಚನಾಮೆ ಮಾಡಿಲ್ಲ ಮತ್ತು ಯಾವುದೇ ವಸ್ತುವನ್ನು ಜಪ್ತು ಪಡಿಸಿಕೊಂಡಿಲ್ಲ. ಈಗ ತೋರಿಸಿದ ದಾಖಲಾತಿಯಲ್ಲಿ ನನ್ನ ರುಜು ಇದೆ . ಆ ದಾಖಲಾತಿಯನ್ನು ನಿ.ಪಿ 7 ಎಂದು ಗುರುತಿಸಲಾಯಿತು. ಅದರಲ್ಲಿ ಸಾಕ್ಷಿಯ ರುಜುವನ್ನು ನಿ.ಪಿ. 7(ಎ) ಎಂದು ಗುರುತಿಸಲಾಯಿತು. (ಸದರಿ ದಾಖಲಾತಿ ಸೀರೆ ಜಪ್ತು ಪಂಚನಾಮೆಯಾಗಿದೆ ). ಆ ಸಹಿಯನ್ನು ನಾನು ಎಲ್ಲಿ ಮಾಡಿದೆ ಎಂದು ನೆನಪಿಲ್ಲ. ಅದರಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಮಾನ್ಯ ಅಭಿಯೋಜಕರು ಅನುಮತಿಯನ್ನು ಕೇಳುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಗಮನಿಸಿ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಸರಕಾರಿ ಅಭಿಯೋಜಕರಿಂದ**

2. ದಿನಾಂಕಃ 07.02.2017 ರಂದು ಭಟ್ಕಳ ನಗರ ಠಾಣೆಯ ದೋಸಾ-21 ರವರು ನನ್ನನ್ನು ಹಾಗೂ ದೋಸಾ-7 ರವರನ್ನು ಠಾಣೆಗೆ ಕರೆಯಿಸಿ ಅಲ್ಲಿ ದೋಸಾ-14 ರವರು ಹಾಜರುಪಡಿಸಿದ ದೋಸಾ-8 ರವರ ಸೀರೆಯನ್ನು ಜಪ್ತು ಮಾಡಿದರು ಎಂದರೆ ನನಗೆ ಮಾಹಿತಿ ಇಲ್ಲ. ಆಗ ನಿ.ಪಿ. 7 ರಂತೆ ಪಂಚನಾಮೆ ಮಾಡಿ ಸಹಿ ಪಡೆದರು ಎಂದರೆ ಸಹಿ ನನ್ನದು ಆದರೆ

ಪಂಚನಾಮೆ ಬಗ್ಗೆ ನನಗೆ ಮಾಹಿತಿ ಇಲ್ಲ . ನ್ಯಾಯಾಲಯದಲ್ಲಿರುವ ಆರೋಪಿ ನನಗೆ ಪರಿಚಯ ಇದ್ದಾನೆ. ಆರೋಪಿ ನನ್ನ ಕೇರಿಯವನು . ಆರೋಪಿಗೆ ಸಹಾಯ ಮಾಡಲು ನಾನು ಈ ದಿನ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎ ಎ ಎ ರವರಿಂದ**

ಏನೂ ಇಲ್ಲ ಎಂದು ಹೇಳಿರುತ್ತಾರೆ.

**ಮರು ವಿಚಾರಣೆಃ – ಇಲ್ಲ –**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ